

ನಮ್ಮಂಥವ್ರು ಶ್ರದ್ಧೆಯಿಂದ ಅಲಂಕರಿಸಿಕೊಂಡು ಆತ್ಮರತಿಗೊಳ್ಳೋದು ಒಂದೆಡೆಯಾದ್ರೆ ಕೆಲವೊಮ್ಮೆ ಮನಸ್ಸಿಲ್ಲದಿದ್ರೂ ಅಪ್ ಟು ಡೇಟ್ ಅಮ್ಮಯ್ಯ ಆಗ್ಬೇಕಾಗುತ್ತೆ. ಅಯ್ಯೋ! ಅಂಥದ್ದೇನಾಯ್ತಿವಾಗ? ಯಾಕೀ ಕರುಣಾರಸ ಅಂತಿದ್ದೀರಾ, ಇದು ಮದುವೆ ಮಾಸವಾದ್ದರಿಂದಲೇ ತೋಡಿ ರಾಗ ಕುಯ್ತಿರೋದು... ಖರ್ಚೇನು ಕಡಿಮೆಯೇ?

ಕಪಾಟಲ್ಲಿ ಕೊಳೀತಿರೋ ರೇಷ್ಮೆಸೀರೆಗಳನ್ನು ಜಾಲಾಡ್ಸಿ, ಹೋಗ್ತಿರೋ ಸಮಾರಂಭದ ಅಂತಸ್ತಿಗೆ ತಕ್ಕಂತೆ ಹೆಕ್ಕಿ ತೆಗೆದು ಇಸ್ತ್ರಿಶಾಸ್ತ್ರ ಮಾಡಿ ನೆಟ್ಟಗಾಗಿಸ್ಬೇಕು; ಬ್ಯಾಂಕಿನ ಉಕ್ಕಿನ ಅಲ್ಮೆರಾಗಳಲ್ಲಿ ಸಾವಿರಗಟ್ಟಲೆ ಬಾಡಿಗೆ ಬಡ್ದು ಕಾಪಿಟ್ಟ ಹೊನ್ನು; ಮನೆ ಡಬ್ಬಿಗಳಲ್ಲಿರುವ ರೋಲ್ಡ್ ಗೋಲ್ಡ್, ಮ್ಯಾಚಿಂಗ್ ಬಳೆಗಳನ್ನು ಬಂಧನದಿಂದ ಬಿಡಿಸಿ ಬೆಳಕಲ್ಲಿ ಮೆರೆಸೋದಕ್ಕಾಗಿ ಅವುಗಳ ಯೋಗ್ಯತೆ ಪರಿಶೀಲಿಸಿ ಯಾವ್ಯಾವ ಸಂದರ್ಭಕ್ಕೆ ಯಾವ್ಯಾವುದನ್ನು ಸೆಟ್ ಮಾಡಿ ಧರಿಸಬೇಕು; ಇನ್ನೆಷ್ಟು ಶಾಪಿಂಗ್ ಮಾಡಿ ಹಣ ಪೋಲು ಮಾಡಬಹುದೆಂಬುದನ್ನು ನಿರ್ಧರಿಸಿ ಕಾರ್ಯೋನ್ಮುಖಳಾಗುವುದು; ಪಾರ್ಲರ್ ಸಂಸ್ಕೃತೀನೂ ಮೈಗೂಡಿಸಿಕೊಂಡಿದ್ದಲ್ಲಿ ಇವೆಲ್ಲದರೊಟ್ಟಿಗೆ ಮೆನಿಕ್ಯೂರ್, ಪೆಡಿಕ್ಯೂರ್, ಫೇಷಿಯಲ್, ಐಬ್ರೊ ಮುಂತಾಗಿ ಮಾಡಿಸಿಕೊಳ್ಳುವ ತರಾತುರಿ.

ಸದ್ಯ, ನನಗೆ ಆ ಖಯಾಲಿ ಇಲ್ಲದ್ದರಿಂದ ನಿವೃತ್ತ ಪತಿರಾಯರ ಜೊತೆಗೆ ನಿವೃತ್ತ ಪರ್ಸೂ ಬಚಾವು. ಇನ್ನೇನು ಹಿರಿಯ ನಾಗರಿಕ ಪಟ್ಟಾಭಿಷೇಕಿಯಾಗೋ ಹುಮ್ಮಸ್ಸಿನ ನನಗೋ ತಲೆಯಲ್ಲಳಿದುಳಿದ ಬೆಳ್ಳಿಕೇಶವನ್ನು ಕಾರ್ಮೋಡವಾಗಿಸ್ಕೊಂಡು 'ಮತ್ತೆ ಹರಯ... ಸನಿಹ...' ಹಾಡನ್ನು ಗುನುಗ್ತಾ ಸಂತೃಪ್ತಿಯಲ್ಲಿ ತೇಲುತ್ತಿದ್ದೆ.

ಈ ಸಲದ ಮದುವೆಯ ಸಮಾರಂಭದ ತಯಾರಿಯ ಸಡಗರಕ್ಕೆ ವಿಶೇಷ ಕಾರಣವೂ ಸೇರಿತ್ತು, ಏನಂದ್ರೆ ಬಾಲ್ಯದ ಗೆಳತಿಯರನ್ನ ಭೇಟಿಯಾಗೋ ಸುಸಂದರ್ಭ.

ಮಹಾನಗರಿಯ ಮದುವೆಯೆಂದರೆ ಕೇಳಬೇಕೇ, ಸ್ವಲ್ಪವೂ ಅಲಕ್ಷ್ಯ ಮಾಡುವಂತಿಲ್ಲ. ಸಾಕಷ್ಟು ಪೂರ್ವ ತಯಾರಿಯೊಂದಿಗೆ ಭರ್ಜರಿ ತಯಾರಾಗಿ ಶಾಲಾ ಗೆಳತಿ ಕಲ್ಪಿ ಮಗಳ ಮದುವೆಗೆ ಹುಮ್ಮಸ್ಸಿನಲ್ಲಿ ಬಂದಿಳಿದಿದ್ದೆ. ಶಾಲೆ ಬಿಟ್ಟ ಮೇಲೆ ಚದುರಿದ್ದ ಬಾಲ್ಯದ ಗೆಳತಿಯರೆಲ್ಲರೂ ಅಲ್ಲಿ ಸಂಧಿಸಿದ್ದರಿಂದ ಮದುವೆ ವಾತಾವರಣದ ಸಂಭ್ರಮದ ಜೊತೆ ನಮ್ ಸಂಭ್ರಮವೂ ಸೇರಿ ದ್ವಿಗುಣಗೊಂಡಿತ್ತು. ಸ್ಕರ್ಟು, ಫ್ರಾಕಿನಿಂದ ಬಡ್ತಿ ಪಡೆದು ಲಂಗ ದಾವಣಿ, ಮ್ಯಾಕ್ಸಿ, ಬೆಲ್‌ಬಾಟಮ್, ಸೀರೆಯೆಂದು ಹಂತಹಂತವಾಗಿ ಶಿಫ್ಟ್ ಆಗೋ ಹೊತ್ತಿಗೆ ದಿಕ್ಕಾಪಾಲಾಗಿದ್ದ ಗೆಳತಿಯರ ಗುಂಪು ಸುಮಾರು ಮೂವತ್ತೈದು ವರ್ಷಗಳ ನಂತರ ಮತ್ತೆ ಬಲಿತ ಸ್ಥಿತಿಯಲ್ಲಿ ಒಗ್ಗೂಡಿ ಸವಿನೆನಪಿನಲ್ಲಿ ಜೀಕಿದ್ದೆವು.

ಆರನೇ ಇಯತ್ತೆಯಲ್ಲಿದ್ದಾಗ ನಮ್ಮಷ್ಟೇ ಎತ್ತರದ ಅಪ್ಪನ ದೊಡ್ಡ ಬಾರ್‌ಸೈಕಲನ್ನು ಹೊಡೆಯಲು ನಾವ್ನಾವೇ ಕಲಿತದ್ದು; ಕಲಿಯುವ